**ಎಸ್.ಸಿ.ಸಂಖ್ಯೆಃ10022/2025**
**ಪ್ರಾ.ಸಾ.ಸಂಖ್ಯೆಃ 9**
**ಚಾ.ಸಾ.ಸಂಖ್ಯೆಃ 15**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ</u>**

**ಎಸ್.ಸಿ.ಸಂಖ್ಯೆಃ 10022/2025**

| | |
|---|---|
| ಹೆಸರುಃ | ರಮೇಶ ಸೊಕನಾದಗಿ, |
| ತಂದೆಯ ಹೆಸರುಃ | ಹನಮಂತ |
| ವಯಸ್ಸುಃ | **30** ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸಃ | ದಾದನಟ್ಟಿ |

**ಸಾಕ್ಷಿಯನ್ನು ದಿಃ 25.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-</u>**

**1.** ಚಾಸಾ**-1, 10** ಹಾಗೂ **11** ನನ್ನ ಸಂಬಂಧಿಕರು ಇರುತ್ತಾರೆ. ಸುಮಾರು ಎರಡು ವರ್ಷಗಳ ಹಿಂದೆ ಈಗ ನಾನು ನೋಡುತ್ತಿರುವ ನಿಪಿ**-10** ನ್ನು ಪೊಲೀಸರು ಹೇಳಿದಂತೆ ಬರೆದಿದ್ದು, ಅದಕ್ಕೆ ನನ್ನ ಸಹಿ ಇದೆ. **(**ಸಾಕ್ಷಿದಾರರ ಸಹಿಯನ್ನು ನಿಪಿ**-10(**ಬಿ**)** ಅಂತ ಗುರುತಿಸಲಾಯಿತು. ಇಷ್ಟನ್ನು ಹೊರತುಪಡಿಸಿ ನನಗೆ ಬೇರೆನೂ ಗೊತ್ತಿಲ್ಲ. ನಾನು ಈ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಸಮಯದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರು ಪ್ರತಿಕೂಲ ಪ್ರವೃತ್ತಿಯನ್ನು ತೋರುತ್ತಿದ್ದು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು ಅದು ನಿಜವೆಂದು ಕಂಡು ಬಂದಿದ್ದರಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**<u>ಪಾಟಿಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>**

**1.** ದಿ**: 25.01.2023** ರಂದು ಆರೋಪಿತರು ಚಾಸಾ**-10** ಹಾಕಿಸಿದ್ದ ಬ್ಯಾನರನ್ನು ಕಿತ್ತು ಒಗೆದ ಬಗ್ಗೆ ಗಲಾಟೆಯಾಗಿತ್ತು, ಅದು ನನಗೂ ತಿಳಿದಿತ್ತು ಎಂದರೆ ಸರಿಯಲ್ಲ. ದಿ**: 30.01.2023** ರಂದು ಆರೋಪಿತರು ಚಾಸಾ**-1** ಹಾಗೂ **10** ಇವರಿಗೆ ಹಲ್ಲೆ ಮಾಡಿದ್ದು, ಅವರು ಆಸ್ಪತ್ರೆಯಲ್ಲಿ ಸೇರಿದ ಬಗ್ಗೆ ತಿಳಿದು ನಾನು ಹೋಗಿ ನೋಡಿದೆ, ಆಗ ಚಾಸಾ**-10** ಇವರಿಗೆ ಅಲ್ಲಲ್ಲಿ ಗಾಯವಾಗಿತ್ತು ಎಂದರೆ ಸರಿಯಲ್ಲ. ನಾನು ಚಾಸಾ**-1** ರವರು ಹೇಳಿದ ರೀತಿಯಲ್ಲಿ ನಿಪಿ**-10** ರ

**ಎಸ್.ಸಿ.ಸಂಖ್ಯೆಃ 10022/2025**
**ಪ್ರಾ.ಸಾ.ಸಂಖ್ಯೆಃ 9**
**ಚಾ.ಸಾ.ಸಂಖ್ಯೆಃ 15**

ದೂರು ಬರೆದಿದ್ದೇನೆ ಎಂದರೆ ಸರಿಯಲ್ಲ. ನಂತರ ಪಂಚನಾಮೆ ಮಾಡುವಾಗಲೂ ಕೂಡ ನಾನು ಹಾಜರಿದ್ದೆ ಎಂದರೆ ಸರಿಯಲ್ಲ.

**2.** ನಾನು ಆ ಬಗ್ಗೆ ಈಗ ಓದಿ ಹೇಳಲಾದ ರೀತಿಯಲ್ಲಿ ಅಂದರೆ "ಹೋದ ವಾರ ದಿನಾಂಕ: **25.01.2023** ರಂದು **..... . .. ....** ನಾನೂ ಕೂಡ ಹಾಜರಿದ್ದೆನು" ಅಂತ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. (ಸದರಿ ಹೇಳಿಕೆಯನ್ನು ನಿಪಿ-**18** ಅಂತ ಗುರುತಿಸಲಾಯಿತು). ಘಟನೆಯ ಬಗ್ಗೆ ತಿಳಿದು, ಚಾಸಾ-**1** ರವರು ಹೇಳಿದಂತೆ ನಿಪಿ-**10** ರಂತೆ ದೂರು ಬರೆದು, ನಿಪಿ-**18** ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು: ಆರೋಪಿ ಪರ ವಕೀಲರಿಂದ: ಇಲ್ಲ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮುಧೋಳ.**